ದಟ್ಟವಾದ ಹೊಗೆ ಮಾತ್ರ ಏಳುತ್ತಿತ್ತು. ಮುಖಕ್ಕೆ ಟವಲ್ ಸುತ್ತಿಕೊಂಡು ಜಡೆಯಪ್ಪನ ಶಿಷ್ಯ ಹೊಗೆ ಕಾರುತ್ತಿದ್ದ ಸೂಡು ಹಿಡಿದು ಮರಹತ್ತಿದ್ದ. ಜಡೆಯಪ್ಪ ಈಗಾಗಲೇ ಮರದ ಮೇಲೆ ಸೂಡಿಗಾಗಿ ಕಾಯುತ್ತಿದ್ದ. ಸುಮಾರು ಎರಡೂವರೆ ಅಡಿ ಅಗಲ, ಎರಡು ಅಡಿ ಉದ್ದನಾಗಿದ್ದ ಈ ಗೂಡಿನಲ್ಲಿ ಸುಮಾರು 60ರಿಂದ 70 ಸಾವಿರ ಹುಳುಗಳು ಇದ್ದಿರಬಹುದು. ಸುಮಾರು ಆರು ಕೆ.ಜಿ. ಜೇನುತುಪ್ಪ ಇದ್ದಿರಬಹುದು! ಜಡೆಯಪ್ಪ ತನ್ನ ಕೈಗೆ ಸೂಡು ತೆಗೆದುಕೊಂಡು ಅದು ಕಾರುತ್ತಿದ್ದ ಹೊಗೆ ಗೂಡಿಗೆ ಹಾಯುವಂತೆ ಎತ್ತಿ ಹಿಡಿದ. ಈ ಹೊತ್ತಿಗೆ ನಾನಾಗಲೆ ನನ್ನ ಮನೆಯ ಒಳಗೆ ನುಸುಳಿ ಬೈನಾಕ್ಯುಲರ್ ಹಿಡಿದು ಕಿಟಕಿ ಗಾಜಿನ ಮೂಲಕ ಜೇನುಗೂಡನ್ನು ಗಮನಿಸುತ್ತಿದ್ದೆ. ವಿವೇಕ ಮರದ ಕೆಳಗೇ ನಿಂತು, ಸಾಧ್ಯವಾದ ಎಲ್ಲಾ ಕೋನಗಳಿಂದ ವಿಡಿಯೊ ಶೂಟ್ ಮಾಡುತ್ತಿದ್ದ. ನಮ್ಮ ದೀಪಿಕಾ – ಚಂದನ್ ಸ್ವಲ್ಪವೂ ಹೆದರದೇ ಚಿತ್ರೀಕರಣದಲ್ಲಿ ತೊಡಗಿದ್ದರು. ಬೆಳಗಿನ ಬಿಸಿಲಿಗೆ ಮಿರಿಮಿರಿ ಮಿಂಚುತ್ತಿದ್ದ ಜೇನುಹುಳುಗಳು ಏಕಾಏಕಿ ಎದ್ದು ಜಡೆಯಪ್ಪನನ್ನು ಸುತ್ತುವರಿದು ರೂಂಯ್ಯನೆ ಪ್ರದಕ್ಷಿಣೆ ಹಾಕಲು ಆರಂಭಿಸಿದವು. ಬೈನಾಕ್ಯುಲರ್ ಮೂಲಕ ನೋಡಿದ ನನಗೆ ಹಳದಿ ಬಣ್ಣದ ಜೇನುಹುಟ್ಟು ಏಕಾಏಕಿ ಅನಾವರಣವಾಯಿತು. ಜಡಿಯಪ್ಪನ ಸುತ್ತ ಒಂದು ಜೇನುಕವಚ ನಿರ್ಮಾಣವಾದಂತೆ ಕಂಡಿತು. ಜೊತೆಗೆ, ಸಾಕಷ್ಟು ಜೇನುಹುಳುಗಳು ಕೆಳಗೂ ಬಂದವು. ಜಡೆಯಪ್ಪನ ಸೂಡು ಮಾತ್ರ ಮತ್ತಷ್ಟು ದಟ್ಟವಾದ ಹೊಗೆಯನ್ನು ಕಾರುತ್ತ ಅವನನ್ನು ರಕ್ಷಿಸುತ್ತಿತ್ತು. ವಿವೇಕನ ಮತ್ತು ನಮ್ಮ ಹುಡುಗರ ಸುತ್ತ ಜೇನುಹುಳುಗಳು ಗುಂಯಿಗುಡುತ್ತ ಪ್ರದಕ್ಷಿಣೆ ಹಾಕಿದರೂ, ಒಂದೇ ಒಂದು ಜೇನು ಸಹ ಅವರನ್ನು ಕುಟುಕಲಿಲ್ಲ! ನನ್ನ ಮನೆಯ ಅಂಗಳದಲ್ಲೂ ಸಾಕಷ್ಟು ಜೇನುಗಳು ಹಾರಾಡಲಾರಂಭಿಸಿದವು. ಹೊಗೆಯ ಕಾಟ ತಾಳಲಾರದೆ ನಿಧಾನವಾಗಿ ಜೇನುಹುಳುಗಳು ಪಕ್ಕದ ಕೊಂಬೆಯ ಮೇಲೆ ಒಟ್ಟಾಗಿ ಕುಳಿತವು. ಬಹುಶಃ ಅವು ತಮ್ಮ ಗೂಡನ್ನು ರಕ್ಷಿಸುವುದು ವ್ಯರ್ಥ ಎಂದು ಭಾವಿಸಿದವೋ ಏನೋ. ಗೂಡನ್ನು ಅದರ ಪಾಡಿಗೆ ಅದನ್ನು ಬಿಟ್ಟು ಪಕ್ಕ ಹೋದವು. ಈಗ ಜಡೆಯಪ್ಪ ತನ್ನ ಹರಿತವಾದ ಮಚ್ಚಿನಿಂದ ಜೇನುಹುಟ್ಟುಗಳನ್ನು ಕತ್ತರಿಸಿ ಬಕೆಟ್‌ನೊಳಗೆ ಹಾಕಿದ. ಬಕೆಟ್ ಕೆಳಗೆ ಬಂದ ಮೇಲೆ ಹುಡುಗರು ಜೇನನ್ನು ದೊಡ್ಡ ಬೋಗುಣಿಗೆ ಹಾಕಿಕೊಂಡು ಬಕೆಟ್ ಅನ್ನು ಮತ್ತೆ ಮೇಲಕ್ಕೆ ಕಳುಹಿಸಿದರು. ಎರಡನೇ ಬಾರಿ ಜೇನುಹುಟ್ಟುಗಳು ಕೆಳಗೆ ಬಂದವು, ಮರ ಖಾಲಿಯಾಯಿತು. ಜೇನುಹುಳುಗಳು ಮಾತ್ರ ಪಕ್ಕದ ಕೊಂಬೆಯ ಮೇಲೆ ಕುಳಿತಿದ್ದವು. ಕೆಲವು ಜೇನುಹುಳುಗಳು ಪಟ್ಟು ಬಿಡದೆ ಬಕೆಟ್‌ನಲ್ಲಿರುವ ಜೇನುಹುಟ್ಟಿಗೆ ಅಂಟಿ ಕುಳಿತಿದ್ದವು.

ಜೇನುಹುಟ್ಟುಗಳ ಪಾತ್ರೆಯನ್ನು ಹುಡುಗರು ಮನೆಯ ಅಂಗಳಕ್ಕೆ ತಂದರು. ಜಡೆಯಪ್ಪ ಮರದಿಂದ ಕೆಳಗೆ ಇಳಿದ. 'ನೀವೇ ಹಿಂಡ್ಕೊಳ್ಳಿ ಸಾ...' ಎಂದು ಜೇನು ಹಿಂಡುವ ಕೆಲಸ ನಮಗೇ ಬಿಟ್ಟ. ವಿಶಿಷ್ಟ ಘಮಲಿನ, ಚಿನ್ನದ ಬಣ್ಣದ, ಶುದ್ಧ, ಸ್ನಿಗ್ಧ ಜೇನು! ಹುಡುಗರಿಗಂತೂ ಖುಷಿಯೋ ಖುಷಿ. ವಿವೇಕನೂ ಹಿಂಡಲು ಆರಂಭಿಸಿದ. ಅಲ್ಲೇ ಜರಡಿಯಿಂದ ಸೋಸಿ ಬೇಕಾದ ಸೀಸೆಗಳಿಗೆ, ಪಾತ್ರೆಗಳಿಗೆ ತುಂಬತೊಡಗಿದೆವು. ವಿವೇಕನಿಗೆ ಅಚ್ಚರಿಯೋ ಅಚ್ಚರಿ. ಸಾಕಷ್ಟು ಜೇನುಗಳು ನಮ್ಮ ಸುತ್ತ ಹಾರುತ್ತಿದ್ದವು, ಕೆಲವು ಹುಟ್ಟಿನ ಮೇಲೆ ಕುಳಿತ ಜೇನು ಕುಡಿಯುತ್ತಿದ್ದವು, ಆದರೆ ಒಂದೇ ಒಂದೂ ಸಹ ನಮ್ಮನ್ನು ಕುಟುಕಲಿಲ್ಲ. 'ಅಣ್ಣ ಈ ಜೇನುಹುಳಗಳ ಜೇನನ್ನು ನಾವು ಕಿತ್ಕೊಂಡಿದೀವಿ, ಆದರೆ ಈ ಜೇನುಹುಳುಗಳಿಗೆ ನಮ್ಮ ಮೇಲೆ ಕೋಪಾನೆ ಇಲ್ಲ ನೋಡಿ, ಒಂದಾದರೂ ನನ್ನನ್ನ ಕಚ್‌ಲಿಲ್‌ವಲ್ಲ' ಎಂದ. ನಾನೂ ಗಮನಿಸುತ್ತಲೇ ಇದ್ದೆ. ಜೇನುಹುಟ್ಟುಗಳ ರಾಶಿಯನ್ನೇ ಎದುರಿಗೆ ಹರಡಿ ಕುಳಿತಿದ್ದೇವೆ. ಹುಟ್ಟುಗಳನ್ನೂ ಹಿಂಡಿ ಹಿಪ್ಪೆ ಮಾಡುತ್ತಿದ್ದೇವೆ. ಸುತ್ತಮುತ್ತ ಸಾಕಷ್ಟು ಜೇನುನೊಣಗಳು ಹಾರುತ್ತಿವೆಯೇ ಹೊರತು ಒಂದೂ ಸಹ ಕುಟುಕಲಿಲ್ಲ. ದೋಷಾರೋಪ ಮಾಡುವುದು, ಸೇಡು ತೀರಿಸಿಕೊಳ್ಳುವುದು ಬಹುಶಃ ಮನುಷ್ಯನಂತಹ ಬುದ್ಧಿವಂತ ಪ್ರಾಣಿಗೆ ಮೀಸಲಾದ ಕೌಶಲಗಳು